

ಉದ್ಯಾನವನದ ಅರಣ್ಯಮಿಶ್ರಿತ ಪರ್ವತಗಳ ನೋಟ



ಪೌಲನಾಸ್ ಜಲಪಾತದ ನೋಟ

ಸಾವಿರ ವರ್ಷಗಳ ಇತಿಹಾಸ ಹೊಂದಿರುವ ವಿಕ್ಲೋ ಪರ್ವತ ಒಂದು ಕಾಲದಲ್ಲಿ ವಸಾಹತುಗಾರರನ್ನು ಆಕರ್ಷಿಸಿತ್ತು. ಇಲ್ಲಿನ ಗ್ಲೆಂಡಾಲೋಘ್, ಗ್ಲೆಂಡಾಸಾನ್ ಕಣಿವೆಗಳಲ್ಲಿ 1800ರಿಂದ 1963ರವರೆಗೆ ಗಣಿಗಾರಿಕೆ ನಡೆದಿದೆ. ಆ ಬಳಿಕ ಗಣಿಗಾರಿಕೆಯನ್ನು ನಿಷೇಧಿಸಲಾಯಿತು.

ಐರ್ಲೆಂಡ್‌ನ ರಾಜಧಾನಿ ಡಬ್ಲಿನ್‌ನಿಂದ ವಿಕ್ಲೋ ಪರ್ವತದ ಗ್ಲೆಂಡಾಲೋಘ್ ಕಣಿವೆಗೆ 68 ಕಿಲೋಮೀಟರ್ ದೂರ. ನಾವು ವಾಸವಿದ್ದ ಅಥ್ಲೋನ್ ಪಟ್ಟಣದಿಂದ 173 ಕಿ.ಮೀ. ಅಂತರ. ಕಾರಿನಲ್ಲಿ ಹೊರಟು, ವಿಕ್ಲೋ ಪರ್ವತ ಮಾರ್ಗದಲ್ಲಿ ದಟ್ಟ ಹಸಿರನ್ನು ಆನಂದಿಸಿದೆವು. ಕೆಲವು ಕಡೆಯಂತೂ ನಿಂತು ನೋಡಬೇಕೆನ್ನಿಸುವಂತೆ ರಮ್ಯ ದೃಶ್ಯಗಳು.

ಅಪ್ಪರ್‌ಲೇಕ್ ಸರೋವರ ಕಾಡಿನ ನಡುವೆ, ಪರ್ವತದ ಕಣಿವೆ ಸೇರಿಕೊಂಡಂತೆ ಇರುವುದರಿಂದ ರಮಣೀಯ ದೃಶ್ಯಗಳು ಮುದ ನೀಡುತ್ತವೆ. ಸರೋವರದ್ದು ತಿಳಿನೀರು. ಸರೋವರಕ್ಕೆ ಎರಡೂ ಪರ್ವತಗಳ ಕಣಿವೆಯಿಂದ ಹರಿದು ಬರುವ ನೀರು ದೂರದಿಂದಲೇ ಗಮನ ಸೆಳೆಯುತ್ತದೆ. ಮುಂದೆ ಸಾಗಿದರೆ ವಿಶಾಲವಾದ ಉದ್ಯಾನವನ. ಕಾಲುದಾರಿಯಲ್ಲೇ ನಡೆಯುತ್ತಾ ಸಾಗಿದಾಗ ಪೌಲನಾಸ್ ಜಲಪಾತಕ್ಕೆ ಮಾರ್ಗ ಸೂಚಿಸುವ ಕೈಮರ ದೊರಕುತ್ತದೆ. ಈ ಜಲಪಾತವನ್ನು ನೋಡಬೇಕಾದರೆ ಅರಣ್ಯದ ನಡುವಣ ಬೆಟ್ಟವನ್ನೇರಿ ಹೋಗಬೇಕು.

**ಪೌಲನಾಸ್ ಜಲಪಾತ:** ಜಲಪಾತ ತಲುಪಲು ಕಡಿದಾದ ದಾರಿಯಲ್ಲಿ ಸಾಗಬೇಕಿದ್ದು, ಕಾಲುದಾರಿಯನ್ನು ನಿರ್ಮಿಸಿದ್ದಾರೆ. ಜಲಪಾತ